**ಮೆಃ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಮುಧೋಳ**

C.C.No.809/2012
CW7/PW11

| | |
|---|---|
| ಹೆಸರು | ಮಂಜುಳಾ ಪಾಟೀಲ |
| ತಂದೆಯ ಹೆಸರು | ರಾಜೇಂದ್ರ |
| ವಯಸ್ಸು | 45 ವರ್ಷ |
| ಉದ್ಯೋಗ | ಗೃಹಿಣಿ |
| ವಾಸಸ್ಥಳ | ಮುಧೋಳ |

**ದಿನಾಂಕಃ 05-02-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಎ.ಪಿ.ಪಿ ರವರಿಂದ.**

ನನಗೆ ಚಾಸಾ-1 ರವರ ಪರಿಚಯ ಇರುತ್ತದೆ. ಈಗ ಸುಮಾರು 13 ವರ್ಷಗಳ ಹಿಂದೆ ಚಾಸಾ-1 ರವರ ಮನೆಯಲ್ಲಿ ಕಳ್ಳತನವಾಗಿತ್ತು. ಸದರಿ ಕಳ್ಳತನ ಯಾರು ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನೀಡಿರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**ಪಾಟಿ ಸವಾಲು- ಎ.ಪಿ.ಪಿ ರವರಿಂದ.**

ದಿನಾಂಕ 12.06.2012 ರಂದು ಮಧ್ಯಾಹ್ನ 3-30 ಗಂಟೆ ಸುಮಾರಿಗೆ ನಾನು ಮನೆಯಲ್ಲಿರುವಾಗ ಚಾಸಾ-1 ರವರು ನನಗೆ ಪೋನ ಮಾಡಿ ನಮ್ಮ ಮನೆಯಲ್ಲಿಯ ಎಲ್ಲರೂ ಹೋರಗೆ ಹೋಗಿರುತ್ತಾರೆ ಮತ್ತು ನನಗೆ ಪ್ಲಂಬರ್ ಇವನು ಪೋನ ಮಾಡಿ ನಮ್ಮ ಮನೆಯ ಹಿತ್ತಲಿನ ಬಾಗಿಲು ತೆಗೆದಿದ್ದು ಇರುತ್ತದೆ, ಆದ್ದರಿಂದ ತಾವು ಎಸ್.ಎಸ್.ಪಾಟೀಲ ಇವರ ಮನೆಯಲ್ಲಿಯ ನಮ್ಮ ಮನೆಯ ಕೀಲಿಯನ್ನು ಇಸಿದುಕೊಂಡು ನಮ್ಮ ಮನೆಗೆ ಹೋಗಿ ಸ್ವಲ್ಪ ನೋಡಿರಿ ಅಂತಾ ಹೇಳಿದರು ಎಂದರೆ ಸರಿಯಲ್ಲ. ನಂತರ ನಾನು ಎಸ್.ಎಸ್. ಪಾಟೀಲ ರವರ ಕಡೆಯಿಂದ ಚಾಸಾ-1 ರವರ ಮನೆಯ ಕೀಲಿಯನ್ನು ತೆಗೆದುಕೊಂಡು ಅವರ ಮನೆಗೆ ಹೋಗಿ ಕೀಲಿಯನ್ನು ತೆಗೆದು ಒಳಗೆ ಹೋಗಿ ನೋಡಿದಾಗ ಅವರ ಮನೆಯ ಬೆಡ್ ರೂಮದಲ್ಲಿಯ ಟ್ರೇಜರಿ ಬಾಗಿಲು ತೆಗೆದಿತ್ತು ಮತ್ತು ಹಿತ್ತಲಿನ ಬಾಗಿಲನ ಒಳಗಿನ ಕೊಂಡಿ ಮುರಿದು ಬಿದ್ದಿರುವುದನ್ನು ಕಂಡು ನಾನು ಚಾಸಾ-1 ರವರಿಗೆ ಪೋನ ಮಾಡಿ ಸದರಿ ವಿಷಯವನ್ನು ತಿಳಿಸಿದೇನು ಎಂದರೆ ಸರಿಯಲ್ಲ. ನಂತರ ಚಾಸಾ-1 ಮತ್ತು ಅವರ ತಂದೆ ತಾಯಿ ಬಂದ ನಂತರ ನಾವೆಲ್ಲರೂ ಅವರ ಮನೆಯಲ್ಲಿ ಹೋಗಿ ನೋಡಿದಾಗ ಚಾಸಾ - 1 ರವರ ಮನೆಯಲ್ಲಿಯ ಟ್ರೇಜರಿಯಲ್ಲಿದ್ದ ಒಟ್ಟ 17 ತೋಲೆ 7.5 ಗ್ರಾಂ

ತೂಕದ ಬಂಗಾದ ಆಭರಣಗಳು ಕಳ್ಳತವಾಗಿರುವುದು ಕಂಡುಬಂದಿತ್ತು ಎಂದರೆ ಸರಿಯಲ್ಲ. ಸದರಿ ಆಭರಣಗಳನ್ನು ಚಾಸಾ-1 ರವರ ಮನೆಯಲ್ಲಿಂದ ಆರೋಪಿತರು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ನನಗೆ ನಂತರ ಗೊತ್ತಾಯಿತು ಎಂದು ಹಾಗೂ ಸದರಿ ಆರೋಪಿತರ ಪೈಕಿ ಆರೋಪಿ ನಂ.1 ಇವನು ಚಾಸಾ-1 ರವರ ವಾಹನದ ಮೇಲೆ ಚಾಲಕ ಅಂತಾ ಕೆಲಸ ಮಾಡುತ್ತಿದ್ದನು ಎಂದರೆ ಸರಿಯಲ್ಲ.

ಈ ಕುರಿತು ನಾನು ದಿನಾಂಕ 13.06.2012 ರಂದು ಮತ್ತು 21.06.2012 ರಂದು ಈಗ ನನಗೆ ಓದಿ ಹೇಳಿದ ಹಾಗೆ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆ ಮತ್ತು ಮರು ಹೇಳಿಕೆಯನ್ನು ಈಗ ನಿಪಿ-24 ಮತ್ತು 25 ಎಂದು ಗುರುತಿಸಲಾಯಿತು. ನಿಪಿ-24 ಮತ್ತು 25 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹಿತ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ః-** ಆರೋಪಿತರ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆః ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

SD/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ